# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – ೫೯೦ ೦೧೮ (ಕರ್ನಾಟಕ)

ದೂರವಾಣಿ :(೦೮೩೧)೨೪೯೮೧೦೦

ಕುಲಸಚಿವರು

ಫ್ಯಾಕ್ಸ್ :(೦೮೩೧)೨೪೦೫೪೬೭


ಉಲ್ಲೇಖ ಸಂ:ವಿತಾವಿ/ಶೈಕ್ಷಣಿಕ/೨೦೧೪-೧೫/ಎ-೨/ 7564 ದಿನಾಂಕ: 10 OCT 2014

ಸುತ್ತೋಲೆ

ವಿಷಯ: ೨೦೧೪ನೇ ಶೈಕ್ಷಣಿಕ ಸಾಲಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ಕಾಲೇಜು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿವೇತನ ಬಿಡುಗಡೆ ಮಾಡುವ ಸಂಬಂಧ ಅರ್ಹ ವಿದ್ಯಾರ್ಥಿಗಳ ವಿವರವನ್ನು ಕೋರಿದ್ದು ಈ ಸಂಬಂಧ ಕಾಲೇಜುಗಳ ಮೂಲಕ ಆಸಕ್ತ ಅರ್ಹ ವಿದ್ಯಾರ್ಥಿಗಳ ಅರ್ಜಿಗಳನ್ನು ಕಳುಹಿಸಿಕೊಡುವ ಕುರಿತು.

ಉಲ್ಲೇಖ: ಕರ್ನಾಟಕ ಸರ್ಕಾರದ ಪತ್ರ ಸಂ. ಪಪೂಶಿ/ಶೈ.ಶಾ/ಕೇ.ಮಾ.ಸಂ.ಅ.ಸ.ವಿ.ವೇ.೨೦೧೪/೨೦೧೪-೧೫, ದಿನಾಂಕ: ೧೫/೦೯/೨೦೧೪.

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ, ತಮಗೆ ಈ ಮೂಲಕ ತಿಳಿಸುವುದೇನೆಂದರೆ, ಮಾರ್ಚ್-೨೦೧೪ರ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಂದ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ (MHRD) ವಿದ್ಯಾರ್ಥಿ ವೇತನಕ್ಕೆ ಅರ್ಜಿ ಕರೆಯಲಾಗಿದ್ದು ಅರ್ಜಿ ನಮೂನೆಯನ್ನು ಇಲಾಖೆಯ ವೆಬ್‌ಸೈಟ್ http://pue.kar.nic.in/- Scholarship-MHRD Scholarship-MHRD Scholarship 2014 - FRESH BATCHನಲ್ಲಿ ಅಳವಡಿಸಲಾಗಿದ್ದು, ವಿದ್ಯಾರ್ಥಿಗಳು ತಾವು ತುಂಬಿರುವ ಅರ್ಜಿಯನ್ನು ತಮ್ಮ ಕಾಲೇಜಿನ ಪ್ರಾಂಶುಪಾಲರ ಮೂಲಕ ದಿ: ೧೦/೧೦/೨೦೧೪ರೊಳಗಾಗಿ ಕೆಳಕಂಡ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ.

**MHRD SCHOLARSHIP 2014 FRESH BATCH,**
**MHRD Scholarship Section,**
**Dept. Of Pre-University Education,**
**18th cross, Malleshwaram,**
**Bangalore-560 012. Telephone No. 080-23311330**

ಆದೇಶದ ಮೇರೆಗೆ,

[signature]

ಕುಲಸಚಿವರು

ಗೆ:

ಪ್ರಾಂಶುಪಾಲರು, ವಿ.ತಾ.ವಿ.ದಿಂದ ಸಂಯೋಜನೆ/ ಸ್ವಾಯತ್ತತೆ ಪಡೆದ ಎಲ್ಲ ತಾಂತ್ರಿಕ ಮಹಾವಿದ್ಯಾಲಯಗಳು.

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಶ್ಯೆ.ಶಾ./ಕೇ.ಮಾ.ಸಂ.ಅ.ಸ.ವಿ.ವೇ.2014/2014-15

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 012.
ದಿನಾಂಕ: 15-09-2014.

**Book Post**

ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ,
ಬೆಳಗಾಂ.

ಮಾನ್ಯರೇ,

ವಿಷಯ: 2014ನೇ ಶೈಕ್ಷಣಿಕ ಸಾಲಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನವನ್ನು ಬಿಡುಗಡೆ ಮಾಡುವ ಸಂಬಂಧ ಅರ್ಹ ವಿದ್ಯಾರ್ಥಿಗಳ ವಿವರವನ್ನು ಕೋರಿದ್ದು, ಈ ಸಂಬಂಧ ಕಾಲೇಜುಗಳ ಮೂಲಕ ಆಸಕ್ತ ಅರ್ಹ ವಿದ್ಯಾರ್ಥಿಗಳ ಅರ್ಜಿಗಳನ್ನು ಕಳುಹಿಸಿಕೊಡುವ ಕುರಿತು.

********

BP
560104 24.09.2014
A5E2 04609250
भारत INDIA POSTAGE ₹4.00

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾರ್ಚ್ 2014ರ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ನಿಗದಿಪಡಿಸಿರುವ Cut off ಅಂಕಗಳಷ್ಟನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳು 2014ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ (ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ನವದೆಹಲಿ) ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕಲು ಅರ್ಹರಿರುತ್ತಾರೆ. ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ತಲಾ ರೂ.10,000/-ಗಳ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.

ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಸಲ್ಲಿಸಬೇಕಾದ ಅರ್ಜಿ ನಮೂನೆ 09 ಪುಟಗಳು ಮತ್ತು ವಿದ್ಯಾರ್ಥಿಗಳ ಮಾರ್ಗಸೂಚಿ 04 ಪುಟವಾಗಿದ್ದು ಈ ಕೆಳಗಿನಂತೆ ಇರುತ್ತದೆ.

ಅರ್ಜಿ ನಮೂನೆ:

ವಿದ್ಯಾರ್ಥಿಗಳಿಗೆ ಅರ್ಜಿಯನ್ನು ತುಂಬಲು ಮಾರ್ಗಸೂಚಿ 04 ಪುಟಗಳು.
ಪುಟ-1 ಮತ್ತು 2: ಪದವಿ ಪೂರ್ವ ಶಿಕ್ಷಣ ಇಲಾಖೆ ಸಿದ್ಧಪಡಿಸಿರುವ ವಿದ್ಯಾರ್ಥಿಯ ಅರ್ಜಿ ನಮೂನೆ (Data sheet).
ಪುಟ-3 ಮತ್ತು 4 ಕೇಂದ್ರ ಸರ್ಕಾರ(MHRD) ಸಿದ್ಧಪಡಿಸಿರುವ ಅರ್ಜಿ ನಮೂನೆ(Annexure-IV).
ಪುಟ-5: Joining Report (Annexure-V)
ಪುಟ-6, 7 ಮತ್ತು 8: Income Affidavit (Annexure-III).
ಪುಟ-9: Declaration form (Annexure-VI)

ಈ ಅರ್ಜಿ ನಮೂನೆಯನ್ನು ಮತ್ತು ಪ್ರಾಚಾರ್ಯರುಗಳಿಗೆ ಬರೆದಿರುವ ಪತ್ರದ ಪ್ರತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖಾ ವೆಬ್‌ಸೈಟ್‌ನಲ್ಲಿ ಹಾಕಲಾಗಿದೆ. **Website no.:http://pue.kar.nic.in =» Scholarship =» MHRD Scholarship =» MHRD Scholarship 2014-Fresh batch**ನಿಂದ download ಮಾಡಿಕೊಳ್ಳಬಹುದು. ಪ್ರಾಚಾರ್ಯರುಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿರುವಂತೆ ಪದವಿ ಕಾಲೇಜಿನ ಪ್ರಾಚಾರ್ಯರುಗಳಿಗೆ ಕಾರ್ಯನಿರ್ವಹಿಸಲು ಸೂಚಿಸುವುದು. ಭರ್ತಿ ಮಾಡಿದ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಲಕೋಟೆಯ ಮೇಲೆ MHRD SCHOLARSHIP 2014 – FRESH BATCH ಎಂದು ನಮೂದಿಸಿ ವಿದ್ಯಾರ್ಥಿಗಳು ಓದುತ್ತಿರುವ ಕಾಲೇಜುಗಳ ಪ್ರಾಚಾರ್ಯರ ಮೂಲಕ ದಿನಾಂಕ:10-10-2014ರೊಳಗಾಗಿ ಈ ಕೆಳಕಾಣಿಸಿದ ವಿಳಾಸಕ್ಕೆ ಕಳುಹಿಸಲು ತಿಳಿಸಬೇಕು. ಈ ವಿದ್ಯಾರ್ಥಿ ವೇತನದ ಬಗ್ಗೆ ನಿಮ್ಮ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಸೂಕ್ತ ಪ್ರಚಾರ ನೀಡಿ ಇಲಾಖೆಯೊಂದಿಗೆ ಸಹಕರಿಸಲು ಕೋರಿದೆ.

**Joint Director(Academic),**
**MHRD Scholarship Section,**
**Dept. of Pre-University Education,**
**18th Cross, Malleshwaram,**
**Bangalore-560 012.** Telephone No.080-23311330

ತಮ್ಮ ವಿಶ್ವಾಸಿ,
Gadbole
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

Received at the Office of the Registrar
29 SEP 2014